1

# ದೇವರು ಬಯಸುವಂತಹ ಕುಟುಂಬ

ವಾಕ್ಯಭಾಗ: ಎಫೆಸದವರಿಗೆ 5:21-6:4.

ಕೆಲವು ವರ್ಷಗಳ ಹಿಂದೆ, (ಅಥವಾ ಪರಿಪಕ್ವತೆಯಲ್ಲಿ) "ತಿಳುವಳಿಕೆಯಲ್ಲಿ ಬೆಳೆದಿರುವ ಕ್ರೈಸ್ತ ಕುಟುಂಬಗಳ ಸಂಬಂಧಗಳ, ಕುರಿತಾಗಿ ಪ್ರಬೋಧಿಸಲು" ಆಹ್ವಾನಿಸಲ್ಪಟ್ಟ. ಪೂರ್ಣ ತಿಳುವಳಿಕೆಯ ಕುರಿತಾದ ತಲೆಬರಹವನ್ನು ನಾನು ಮೆಚ್ಚಿಕೊಂಡೆ: "ಎಲ್ಲಾ ವಿಷಯಗಳಲ್ಲಿಯೂ ಕ್ರಿಸ್ತನ ಐಕ್ಯವನ್ನು ಹೊಂದುತ್ತಾ ಬರಬೇಕು. ಆತನೇ ಶಿರಸ್ಸು" (ಎಫೆಸ 4:15ಬಿ). *ಸಂಬಂಧಗಳ* ಕುರಿತ ಒತ್ತಾಸೆ ಒಳ್ಳೆಯದೇ: ಯಾಕೆಂದರೆ ನಮಗೆ ಇತರರ ಅವಶ್ಯವಿದೆ (ಆದಿಕಾಂಡ 2:18), ನಾವು ಇತರರೊಂದಿಗೆ ಒಡನಾಟವನ್ನು ಕಲಿತುಕೊಳ್ಳಬೇಕು. *ಕುಟುಂಬದ* ಕುರಿತಾದ ಅಧ್ಯಾಯನ ನನಗೂ ಇಷ್ಟವಾದದ್ದೆ: ಕುಟುಂಬಕ್ಕಿಂತಲೂ ಬೇರೆ ಯಾವುದೇ ಕಾರ್ಯಗಳು ಅಮೂಲ್ಯವಾದದಲ್ಲ. ವಿಶೇಷವಾಗಿ ನನ್ನ ಸ್ವಂತ ಕುಟುಂಬ.

ಈ ತಲೆಬರಹವು ನನ್ನನ್ನು ಸಂತೋಷಪಡಿಸಿದ್ಧರೂ, ನಾನು ಕುಟುಂಬದಿಂದ ದೂರ ಇರುವುದಾದರೆ ನಾನು: ಹೇಗೆ ಕುಟುಂಬದ ಸಂಬಂಧದಲ್ಲಿರುವ *ತಿಳುವಳಿಕೆಯ* ವಿಷಯವನ್ನು ಬೋಧಿಸಲಿ? "ನಾನು ಕುಟುಂಬದ ಸಂಬಂಧಗಳಲ್ಲಿರುವ ಪೂರ್ಣ ತಿಳುವಳಿಕೆಯ ಕುರಿತು ಪ್ರಬೋಧನೆ ಮಾಡಿರ ಬಹುದು." ಅದರ ಸಾಧನೆಯ ಕುರಿತು ಹೇಳಿರಬಹುದು. ಹೇಗೂ, ನನ್ನ ಕೆಲವು ಶ್ರೋತೃಗಳು ನನ್ನನ್ನು ತಿಳಿದವರಾಗಿರುವದರಿಂದ ನಾನು ತಪ್ಪಿಸಿಕೊಳ್ಳಲು ಅಸಾಧ್ಯ!

ಎಫೆಸ 5ನೇ ಅಧ್ಯಾಯದ ಕಡೇಭಾಗವನ್ನು ನಾನು ಗಮನಿಸುವವರೆಗೆ, ನಾನು ಏನು ಅರಿಯದವನಾಗಿದ್ದೆ. ಇಲ್ಲ ಪೌಲನು ಗಂಡ - ಹೆಂಡತಿಯ ಸಂಬಂಧವನ್ನು ಕ್ರಿಸ್ತನು ಮತ್ತು ಕ್ರೈಸ್ತ ಸಭೆಗೆ ಹೋಲಿಸಿದ್ದಾನೆ. ಯೇಸುವಿನ ಹೆಸರು ಪರಿಪಕ್ವತೆಗೆ ಪರ್ಯಾಯವಾಗಿದ್ದರೂ. ಕ್ರಿಸ್ತನು ತನ್ನ ಆತ್ಮೀಕ ದೇಹವಾದ, ಸಭೆಯೊಂದಿಗೆ, ಹೊಂದಿರುವ ಸಂಬಂಧದ ಬಗ್ಗೆ ವಾದಿಸುತ್ತೇನೆ. ಇದರಿಂದ ಪರಿಪಕ್ವವಾದ ಸಂಬಂಧದ ಬಗ್ಗೆ ಒಂದು ಕಲ್ಪನೆಯನ್ನು ಮಾಡಿಕೊಳ್ಳಬಹುದು. ಆದುದರಿಂದ ಎಫೆಸ 5ರ ಕಡೆಯಭಾಗ ಮತ್ತು ಎಫೆಸ 6ರ ಆರಂಭದ ಭಾಗ - ನನ್ನ ಅಧ್ಯಾಯನದ ಮುಖ್ಯ ವಾಕ್ಯಭಾಗವಾಗಿದೆ.

ಈ ಪಾಠವನ್ನು ಆನಂದಿಸಿ, ಸಂತೋಷದಿಂದ ಸ್ವೀಕರಿಸಲಾಗಿದೆ. ಈ ವಿಶೇಷ ಅಧ್ಯಾಯನವನ್ನು ಹೇಗೆ ಪ್ರತಿಪಾದಿಸಬೇಕು ಎಂದು ಯೋಚಿಸುತ್ತಿರುವಾಗ, ನನ್ನ ಮನಸ್ಸು ಪುನಃ ಎಫೆಸ 5ನೇ ಅಧ್ಯಾಯವನ್ನು ಗಮನಿಸಿತು. ಮದುವೆ ಮತ್ತು ಕುಟುಂಬದ ಅಧ್ಯಾಯನಕ್ಕೆ ಯಾವ ವಾಖ್ಯಭಾಗವು ಉತ್ತಮವಾದದ್ದು? ಈ ಪ್ರಾರಂಭದ ಪ್ರಬೋಧನೆಯಲ್ಲಿ, ತಂದೆತಾಯಿಗಳು, ಮತ್ತು ಮಕ್ಕಳು, ಈ ಎರಡು ಗುಂಪುಗಳಿಗೂ, ನನ್ನ ಅಭಿಪ್ರಾಯಗಳನ್ನು ತಿಳಿಸುವವನಾಗಿದ್ದೇನೆ. ಎಫೆಸ 5:21ರಿಂದ ಪ್ರಾರಂಭಿಸಿ 6:4ರವರೆಗೆ ಮುಂದುವರಿಸೋಣ:

> ಒಬ್ಬರಿಗೊಬ್ಬರು ವಿನಯವುಳ್ಳವರಾಗಿ ನಡೆದು ಕೊಳ್ಳಿರಿ.
>
> ಸ್ತ್ರೀಯರೇ, ನೀವು ಕರ್ತನಿಗೆ ಹೇಗೋ ಹಾಗೆಯೇ ನಿಮ್ಮ ನಿಮ್ಮ ಗಂಡಂದಿರಿಗೆ ಅಧೀನರಾಗಿರ್ರಿ. ಕ್ರಿಸ್ತನು ಸಭೆಗೆ ತಲೆಯಾಗಿರುವ ಪ್ರಕಾರವೇ ಗಂಡನು ಹೆಂಡತಿಗೆ ತಲೆಯಾಗಿದ್ದಾನೆ. ಕ್ರಿಸ್ತನೋ ಸಭೆಯೆಂಬ ದೇಹಕ್ಕೆ ರಕ್ಷಕನಾಗಿದ್ದಾನೆ. ಅದರಲ್ಲಿ; ಸಭೆಯು ಕ್ರಿಸ್ತನಿಗೆ ಹೇಗೆ ಅಧೀನವಾಗಿದೆಯೋ ಹಾಗೆಯೇ ಸ್ತ್ರೀಯರು ತಮ್ಮ ತಮ್ಮ

ಗಂಡಂದಿರಿಗೆ ಎಲ್ಲಾ ವಿಷಯಗಳಲ್ಲಿ ಅಧೀನರಾಗಿರಬೇಕು. ಪುರುಷರೇ, ಕ್ರಿಸ್ತನು ಸಭೆಯನ್ನು ಪ್ರೀತಿಸಿದ ಪ್ರಕಾರವೇ ನಿಮ್ಮ ನಿಮ್ಮ ಹೆಂಡತಿಯರನ್ನು ಪ್ರೀತಿಸಿರಿ. ಆತನು ಅದನ್ನು ಪ್ರತಿಷ್ಠೆಪಡಿಸುವದಕ್ಕಾಗಿ ತನ್ನನ್ನು ಒಪ್ಪಿಸಿಕೊಟ್ಟನು. ಅದನ್ನು ಕಳಂಕ ಸುಕ್ಕು ಮುಂತಾದ್ದೊಂದು ಇಲ್ಲದ ಕನ್ನಿಕೆಯೋ ಎಂಬಂತೆ ಪರಿಶುದ್ಧವೂ ನಿರ್ದೋಷವೂ ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ ನಿಲ್ಲಿಸಿಕೊಳ್ಳಬೇಕೆಂದು ವಾಕ್ಯೋಪದೇಶ ಸಹಿತವಾದ ಜಲ ಸ್ನಾನವನ್ನು ಮಾಡಿಸಿ ಶುದ್ಧ ಮಾಡಿದನು. ಹಾಗೆಯೇ ಪುರುಷರು ಸಹ ಸ್ವಂತ ಶರೀರವನ್ನು ಪ್ರೀತಿಸಿಕೊಳ್ಳುವ ಪ್ರಕಾರವೇ ತಮ್ಮ ಹೆಂಡತಿಯರನ್ನು ಪ್ರೀತಿಸುವ ಹಂಗಿನವರಾಗಿದ್ದಾರೆ. ತನ್ನ ಹೆಂಡತಿಯನ್ನು ಪ್ರೀತಿ ಸುವವನು ತನ್ನನ್ನೇ ಪ್ರೀತಿಸಿಕೊಳ್ಳುವವನಾಗಿದ್ದಾನೆ. ಯಾರೂ ಎಂದೂ ಸ್ವಶರೀರವನ್ನು ಹಗೆಮಾಡಿದ್ದಿಲ್ಲ; ಎಲ್ಲರೂ ತಮ್ಮ ಶರೀರಗಳನ್ನು ಪೋಷಿಸಿ ಸಂರಕ್ಷಿಸುತ್ತಾರೆ. ಯಾವ ದೇಹಕ್ಕೆ ನಾವು ಅಂಗಗಳಾಗಿದ್ದೇವೋ ಸಭೆಯೆಂಬ ಆ ದೇಹವನ್ನು ಕ್ರಿಸ್ತನು ಹಾಗೆಯೇ ಪೋಷಿಸಿ ಸಂರಕ್ಷಿಸುತ್ತಾನಲ್ಲಾ. ಇದರ ನಿಮಿತ್ತದಿಂದ ಪುರುಷನು ತಂದೆತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು; ಅವರಿಬ್ಬರೂ ಒಂದೇ ಶರೀರವಾ ಗಿರುವರು ಎಂದು ಬರೆದದೆ. ನಾನು ಕ್ರಿಸ್ತನಿಗೂ ಸಭೆಗೂ ಇರುವ ಸಂಬಂಧವನ್ನು ಕುರಿತು ಮಾತಾಡುತ್ತಾ ಇದ್ದೇನೆ; ಇದುವರೆಗೆ ಗುಪ್ತವಾಗಿದ್ದ ಈ ಸತ್ಯಾರ್ಥವು ಬಹು ಗಂಭೀರವಾದದ್ದು. ಅದಿರಲಿ; ನಿಮ್ಮಲ್ಲಿ ಪ್ರತಿ ಪುರುಷನು ತನ್ನನ್ನು ಪ್ರೀತಿಸಿಕೊಳ್ಳುವಂತೆಯೇ ತನ್ನ ಹೆಂಡತಿಯನ್ನೂ ಪ್ರೀತಿಸ ಬೇಕು; ಪ್ರತಿ ಹೆಂಡತಿಯು ತನ್ನ ಗಂಡನಿಗೆ ಭಯ ಭಕ್ತಿಯಿಂದ ನಡೆದು ಕೊಳ್ಳಬೇಕು.

ಮಕ್ಕಳೇ, ನೀವು ಕರ್ತನಲ್ಲಿರುವವರಿಗೆ ತಕ್ಕ ಹಾಗೆ ನಿಮ್ಮ ತಂದೆತಾಯಿಗಳ ಮಾತನ್ನು ಕೇಳಬೇಕು; ಇದು ಧರ್ಮ. ವಾಗ್ದಾನ ಸಹಿತವಾದ ಮೊದಲನೆಯ ಆಜ್ಞೆಯನ್ನು ಕೇಳಿರಿ - ನಿನ್ನ ತಂದೆ ತಾಯಿಗಳನ್ನೂ ಸನ್ಮಾನಿಸಬೇಕು; ಸನ್ಮಾನಿಸಿದರೆ ನಿನಗೆ ಮೇಲಾಗುವದು, ನೀನು ಭೂಮಿಯ ಮೇಲೆ ಬಹುಕಾಲ ಬದುಕುವಿ. ತಂದೆಗಳೇ, ನಿಮ್ಮ ಮಕ್ಕಳಿಗೆ ಕೋಪವನ್ನೆಬ್ಬಿಸದೆ ಕರ್ತನಿಗೆ ಮೆಚ್ಚಿಗೆಯಾಗಿರುವ ಬಾಲಶಿಕ್ಷೆಯನ್ನೂ ಬಾಲೋಪದೇಶವನ್ನೂ ಮಾಡುತ್ತಾ ಅವರನ್ನೂ ಸಾಕಿಸಲಹಿರಿ.

ಈ ಅಧ್ಯಾಯದಲ್ಲಿರುವ ಬೆಲೆಬಾಳುವ ಎಲ್ಲಾ ಸತ್ಯಗಳನ್ನು ಕೂಲಂಕುಶವಾಗಿ ಧ್ಯಾನ ಮಾಡಲು ಸಾದ್ಯವಿಲ್ಲದೆ ಇದ್ದರೂ, ನಾವು ಕೆಲವು ವಿಷಯಗಳನ್ನು ಧ್ಯಾನಿಸೋಣ "ದೇವ ರು ಬಯಸುವಂಥ ಕುಟುಂಬ." ದೇವರು ಬಯಸುವಂಥ ಕುಟುಂಬದಲ್ಲಿ ಇರಬೇಕಾದ ಲಕ್ಷಣಗಳೇನು?

## ನಿಸ್ವಾರ್ಥ (5:21)

ವಚನ 22ರ ಬದಲು ನಮ್ಮ ಅಧ್ಯಾಯನ ವಚನ 21ರಿಂದ ಪ್ರಾರಂಭವಾದದ್ದು ನಿಮಗೆ ಅಶ್ಚರ್ಯವಾಗಿದೆ. ವಚನ 22ರಿಂದ ಪ್ರಾರಂಭಿಸಲು ಇಚ್ಚಿಸುತ್ತೇನೆ (ಮುಖ್ಯ ವಾಗಿ ಗಂಡಂದಿರಿಗೆ): "ಸ್ತ್ರೀಯರೇ, ನಿಮ್ಮ ಗಂಡಂದಿರಿಗೆ ಅಧೀನರಾಗಿರ್ರಿ." ಇದರ ಹಿನ್ನೆಲೆ ವಚನ 21ರಲ್ಲಿ ಇದೆ: "ಕ್ರಿಸ್ತನಿಗೆ ಭಯಪಡುವವರಾಗಿದ್ದು, ಒಬ್ಬರಿಗೊಬ್ಬರು ವಿನಯವುಳ್ಳವ ರಾಗಿ ನಡೆದುಕೊಳ್ಳಿರಿ." ಕುಟುಂಬಗಳಲ್ಲಿ ನಮಗಿಂತಲೂ, ಇತರರ ಬಗ್ಗೆ ನಾವುಗಳು ಹೆಚ್ಚಿನ ಕಾಳಜಿವಹಿಸಬೇಕು.

ವಚನ 21 ನಿಮ್ಮನ್ನು ತೃಪ್ತಿಪಡಿಸದೆ ಹೋದರೇ: ವಚನ 22ರಲ್ಲಿ ಕ್ರಿಯಾಪದವನ್ನು ಕಾಣಿಸದಿದ್ದರೂ; ವಚನ 21ರಲ್ಲಿ ತೋರಿಸಲಾಗಿದೆ. "ವಿನಯವುಳ್ಳವರಾಗಿರ್ರಿ" ಎಂಬ ಪದಕ್ಕೆ ಯಾವುದೇ ಅರ್ಥವಿರಬಹುದು ವಚನ 22 ಎಲ್ಲಾ ಕ್ರೈಸ್ತರಿಗೂ ಅನ್ವಹಿಸುತ್ತದೆ (ಮುಖ್ಯವಾಗಿ ಪುರಷರಿಗೆ) ಮತ್ತು ವಚನ 21ಕ್ಕೂ ಅನ್ವಹಿಸುತ್ತದೆ.

ಒಬ್ಬರಿಗೊಬ್ಬರು ವಿನಯವುಳ್ಳವರಾಗಿರಬೇಕು ಎಂಬ ನಿಯಮವನ್ನು ಹೊಸ

ಒಡಂಬಡಿಕೆಯ ಉದ್ದಕ್ಕೂ ಬೋಧಿಸಲಾಗಿದೆ:

> ... ಪ್ರೀತಿಯಿಂದ ಒಬ್ಬರಿಗೊಬ್ಬರು ಸೇವೆ ಮಾಡಿರಿ (ಗಲಾತ್ಯ 5:13).
>
> ಒಬ್ಬರು ಮತ್ತೊಬ್ಬರ ಭಾರವನ್ನು ಹೊತ್ತುಕೊಳ್ಳಲಿ (ಗಲಾತ್ಯ 6:2ಎ).
>
> ಒಣಹೆಮ್ಮೆಯಿಂದಾಗಲಿ ಯಾವದನ್ನೂ ಮಾಡದೆ ಪ್ರತಿಯೊಬ್ಬನು ದೀನ ಭಾವದಿಂದ ಮತ್ತೊಬ್ಬರನ್ನು ತನಗಿಂತಲೂ ಶ್ರೇಷ್ಠರೆಂದು ಎಣಿಸಲಿ. ನಿಮ್ಮಲ್ಲಿ ಪ್ರತಿಯೊಬ್ಬನು ಸ್ವಹಿತವನ್ನು ಮಾತ್ರ ನೋಡದೆ ಪರಹಿತವನ್ನು ಸಹ ನೋಡಲಿ (ಫಿಲಿಫಿ 2:3, 4).
>
> ಮಾನಮರ್ಯಾದೆಯನ್ನು ತೋರಿಸುವದರಲ್ಲಿ ಒಬ್ಬರಿಗಿಂತ ಒಬ್ಬರು ಮುಂದಾಗಿರಿ ... (ರೋಮಾಪುರ 12:10ಬಿ).

ಯೇಸು ಕ್ರಿಸ್ತನೇ, ನಮಗೆ ಪರಿಪೂರ್ಣವಾದ ಮಾದರಿಯಾಗಿದ್ದಾನೆ, "ಹಾಗೆಯೇ ಮನುಷ್ಯಕುಮಾರನು ಸೇವೆಮಾಡುವದಕ್ಕೆ ಬಂದನೇ ಹೊರತು ಸೇವೆ ಮಾಡಿಸಿಕೊ ಳ್ಳುವದಕ್ಕೆ ಬರಲಿಲ್ಲ" (ಮತ್ತಾಯ 20:28).

ನಮ್ಮ ಅಧ್ಯಾಯನದಲ್ಲಿ, "ಪ್ರೀತಿ" ಎಂಬ ಪದವನ್ನು, *ಅಗಾಪೇ* (ದೇವರ ಪ್ರೀತಿ) ಎಂಬ ಪದದಿಂದ ತರ್ಜುಮೆ ಮಾಡಿ ಐದು ಸಾರಿ ತಿಳಿಯಪಡಿಸಿದ್ದೇನೆ. ಈ ಪ್ರೀತಿಯ ಕುರಿತಾಗಿ 1 ಕೊರಿಂಥ 13:5ರಲ್ಲಿ, "ಪ್ರೀತಿಯು ಸ್ವಪ್ರಯೋಜನವನ್ನು ಚಿಂತಿಸುವದಿಲ್ಲ."

ಸಂಬಂದಗಳ ಬಗ್ಗೆ ಅಧ್ಯಾಯನ ಮಾಡುವಾಗ, ನಾವು ಯಥಾದೃಷ್ಟಿಯನ್ನು ಇಡಬೇಕಾಗುತ್ತದೆ ಮತ್ತು ಒಬ್ಬರಿಗೊಬ್ಬರು ವಿನಯವುಳ್ಳವರಾಗುವ ನಿಯಮವನ್ನು ನೆನಪಿನಲ್ಲಿಟ್ಟಿರಬೇಕು: ಪುರುಷನು ಏನಾಗಿರಬೇಕೆಂದು ಬಯಸಿದ್ದಲ್ಲಿ, ಸ್ತ್ರೀಯರು ಸ್ವಯಂಪ್ರೇರಣೆಯಿಂದ ತಮ್ಮ ಗಂಡಂದಿರಿಗೆ ಅಧೀನರಾಗಿರಬೇಕು, ಗಂಡನು ತನ್ನ ಹೆಂಡತಿಯನ್ನು ಸಂತೋಷ ಪಡಿಸುವಂಥ ಯಜಮಾನಿಕೆಯನ್ನು ತೋರಿಸಬೇಕು. J. W. ಶೆಪರ್ಡ್ ಎಂಬುವವರು ಎಫೆಸ 5ರ ಕಡೆಯ ಭಾಗದ ಕುರಿತು ಈ ರೀತಿಯಾದ ವಿಮರ್ಷೆಯನ್ನು ನೀಡಿದ್ದಾರೆ, "ಪರಸ್ಪರ ಪ್ರೀತಿ ಮತ್ತು ವಿಶ್ವಾಸ, ಗಂಡನ ಅಭಿಲಾಷೆಯು, ಹೆಂಡತಿಯ ನಿಯಮವಾಗಿರಬೇಕು. ಹೆಂಡತಿಯು ಬಯಸುವ ಆಶೆಯೇ ಗಂಡನು ಹೆಂಡತಿಯ ಮೇಲೆ ನಡೆಸುವ ಅಧಿಕಾರವಾಗಿರಬೇಕು."[1]

## ಗೌರವ (5:21)

ಮನೆಯಲ್ಲಿ ಇರಬೇಕಾದ ಸಂಬಂಧವು ಕ್ರಿಸ್ತೀಯ ಸಂಬಂಧಗಳಾಗಿರ ಬೇಕು. ಇದೇ ಬಹಳ ಪ್ರಾಮುಖ್ಯವಾದದ್ದು. ವಚನ 21ರಲ್ಲಿ ಇರುವ ಅಪ್ಪಣೆ ಏನೆಂದರೆ "*ಕ್ರಿಸ್ತನಿಗೆ ಬಯಪಡವವರಾಗಿದ್ದು* ಒಬ್ಬರಿಗೊಬ್ಬರು ಅಧೀನರಾಗಿರ್ರಿ." (ಒತ್ತಿ ಹೇಳಿದ್ದು ನನ್ನದು.) "ಭಯದ" ಅರ್ಥ ದೇವರ ಭಯ, ಅದು ಆಳವಾಗಿ ಪ್ರಕಟಿಸುವ ಗೌರವ, ಅಥವಾ ಘನತೆ.

ಯಾವುದೇ ಕುಟುಂಬವು ಯೋಗ್ಯವಾಗಿರಬೇಕಾದರೆ ಕುಟುಂಬದ ಪ್ರತಿಯೊಬ್ಬರು ಮೊದಲು ದೇವರನ್ನು ಗೌರವಿಸಬೇಕು. ಕ್ರಿಯಾತ್ಮಕವಾಗಿ ತೋರಿಸಬೇಕಾದರೆ ಕುಟುಂಬದ ಪ್ರತಿ ಸದಸ್ಯರು ಕ್ರೈಸ್ತರಾಗಿರಬೇಕು, ಅವರು ಸತ್ಯವಾದ ಕ್ರೈಸ್ತರಾಗಿರ ಬೇಕು - ಯಥಾರ್ಥವಾದ ಕ್ರೈಸ್ತರಾಗಿರಬೇಕು, ಸಮರ್ಪಿಸಿಕೊಂಡ ಕ್ರೈಸ್ತರಾಗಿರಬೇಕು. ಗಂಡ ಮತ್ತು ಹೆಂಡತಿಯರು ಜೀವವರಕ್ಕೆ ಭಾಧ್ಯರಾಗಿದ್ದೇವೆ ಎಂದು ಹೇಳಿಕೊಳ್ಳವುದು ಎಷ್ಟು ಸುಂದರವಾಗಿರುತ್ತದೆಯಲ್ಲವೇ! (ನೋಡಿರಿ 1 ಪೇತ್ರ 3:7.)


ಮದುವೆ, ಮನೆ, ಮತ್ತು ಕುಟುಂಬ ಎಂಬುದು ದೇವರ ಯೋಜನೆಯ ಒಂದು ಭಾಗವಾಗಿರುತ್ತದೆ - ಆ ಯೋಜನೆ ಹೇಗೆ ಕಾರ್ಯಗತವಾಗಬೇಕು ಎಂದು ದೇವರು ತಿಳಿಸುತ್ತಾನೆ. ಚಾರ್ಲ್ಸ್ ಸ್ಪರ್ಜನ್ ಬರೆದಿರುವಂತೆ "ದೇವರ ಯೋಜನೆಯ ಪ್ರಕಾರ ಕುಟುಂಬದಲ್ಲಿ

ಆಡಳಿತವಿದ್ದರೆ ದೇವ ದೂತರುಗಳು ನಮ್ಮೊಂದಿಗೆ ನೆಲೆಸಲು ಕೇಳಲ್ಪಡುತ್ತದೆ.'' ಒಂದು ವೇಳೆ ದೇವರ ವಾಕ್ಯದ ಆಡಳಿತಕ್ಕೆ ಕುಟುಂಬಗಳು ಒಳಪಡದೆ ಹೋದರೆ? ವಿಲಿಯಮ್ ಕೌಪರ್ ಎಂಬ ಕವಿಯು ಹೇಳಿದ ಹಾಗೆ, ''ಕುಟುಂಬವು ಮಾತ್ರ ಬಿದ್ದುಹೋಗುದಂಥ ಪರದೈಸಿಯಾಗಿರುತ್ತದೆ.'' ಆದರೆ ಕೆಲವು ಮನೆಗಳು ಸ್ವರ್ಗದ ರುಚಿಯನ್ನು ನೀಡದೆ, ನರಕದ ಮಾರ್ಗದರ್ಶನವಾಗಿದೆ.

ಒಂದು ಕುಟುಂಬವು ಯೋಗ್ಯವಾಗಬೇಕಾದರೆ, ಅಲ್ಲಿ ಕ್ರಿಸ್ತೀಯ ಸಂಬಂಧಗಳು ಇರಲೇ ಬೇಕು. ಆದರೆ ಅನೇಕ ಕುಟುಂಬಗಳಲ್ಲಿ ಎಲ್ಲರೂ *ಕ್ರೈಸ್ತರಾಗದೇ* ಇರುವದರಿಂದ, ಮೂರು ಉತ್ತೇಜನಕಾರಿ ಮಾತುಗಳನ್ನು ತಿಳಿಸುತ್ತೇನೆ: (1) ಕುಟುಂಬದ ಕೆಲವು ಸದಸ್ಯರು ಕ್ರೈಸ್ತರಲ್ಲದ ಮನೆಯಲ್ಲಿ ನೇರವೇರುವುದಾದರೆ - ಕ್ರೈಸ್ತನಂತೆ ವರ್ತಿಸು ಇತರರು ದೇವರ ಮಕ್ಕಳಲ್ಲಿ ಎಂಬುದಾಗಿ ಅಲ್ಲ (ಅವರಿರುವದಿಲ್ಲ), ಆದರೆ ನೀನು ದೇವರ ಮಗನಾಗಿರುವದರಿಂದ. (2) ಒಂದು ವೇಳೆ ನೀನೇ ಕ್ರೈಸ್ತನಾಗಿರದಿದ್ದರೆ, ಕ್ರೈಸ್ತನಾಗುವದಕ್ಕೆ ಇನ್ನೊಂದು ದಿನವನ್ನು ಕಾಯಬೇಡ. (3) ನೀನು ಇನ್ನೂ ವಿವಾಹವಾಗದೆ ಇದ್ದಲ್ಲಿ, ಕ್ರೈಸ್ತರನ್ನೇ ಮದುವೆಯಾಗುವದಕ್ಕೆ ನಿರ್ಧರಿಸು.

## ಜವಾಬ್ದಾರಿಯ ಹೊಣೆ (5:22-24; 6:1-4)

ಕ್ರೈಸ್ತ ಕುಟುಂಬದ ಪ್ರತಿಯೊಬ್ಬ ಸದಸ್ಯನಿಗೂ ದೇವರು - ನೇಮಿಸಿರುವ ಜವಾಬ್ದಾರಿಯ ಹೊಣೆಯನ್ನು ನನ್ನ ಅಧ್ಯಾಯನದಲ್ಲಿ ಚಿತ್ರೀಕರಿಸಿದ್ದೇನೆ. ಮುಂದಿನ ಪಾಠಗಳಲ್ಲಿ ಇದರ ಬಗ್ಗೆ ಹೆಚ್ಚಾಗಿ ಅಭ್ಯಾಸಿಸೋಣ. ಸದ್ಯಕ್ಕೆ ಈ ಕೆಳಕಂಡ ಸರಳ ರೇಖಾ ಚಿತ್ರದಲ್ಲಿ ಸಂಕ್ಷೇಪವಾಗಿ ವಿವರಿಸಿದ್ದೇನೆ. ಮೇಲ್ಬಾಗದಲ್ಲಿರುವ ''C'' - ಅಂದರೆ ಕ್ರಿಸ್ತನು, ''H'' ಅಂದರೆ ಪುರಷನು, ''W' ಅಂದರೆ ಸ್ತ್ರೀ ತಳ ಭಾಗದಲ್ಲಿರುವ, ''C'' ಚಿತ್ರವು ಮಕ್ಕಳು ಎಂಬುದಾಗಿ.




ಎಫೆಸ 5:23, 24 ''ಕ್ರಿಸ್ತನು ಸಭೆಗೆ ತಲೆಯಾಗಿರುವದರಿಂದ'' ಸಭೆಯು ಆತನಿಗೆ ಅಧೀನವಾಗುತ್ತದೆ. ಪರಲೋಕದಲ್ಲಿಯೂ, ಭೂಲೋಕದಲ್ಲಿಯೂ ''*ಎಲ್ಲಾ* ಅಧಿಕಾರವು ... ಆತನಿಗೆ ಕೊಡಲ್ಪಟ್ಟಿದೆ'' (ಮತ್ತಾಯ 28:18; ಒತ್ತಿ ಹೇಳಿದ್ದು ನನ್ನದು). ಕುಟುಂಬದಲ್ಲಿರುವ, ಪುರುಷ, ಸ್ತ್ರೀ, ಹಾಗು ಮಕ್ಕಳು ಆತನಿಗೆ ಅಧೀನರಾಗಿರಬೇಕು.

ಅದರಂತೆಯೇ ಸ್ತ್ರೀಗೆ ಪುರುಷನು ಯಜಮಾನನಾಗಿದ್ದಾನೆ: ''ಕ್ರಿಸ್ತನು ಸಭೆಗೆ ತಲೆಯಾಗಿರುವ ಪ್ರಕಾರವೇ ಗಂಡನು ಹೆಂಡತಿಗೆ ತಲೆಯಾಗಿದ್ದಾನೆ, ಕ್ರಿಸ್ತನೇ ಸಭೆಯೆಂಬ ದೇಹಕ್ಕೆ ರಕ್ಷಕನಾಗಿದ್ದಾನೆ. ಅದರಲ್ಲಿ ಸಭೆಯು ಕ್ರಿಸ್ತನಿಗೆ ಹೇಗೆ, ಅಧೀನವಾಗಿದೆಯೋ, ಹಾಗೆಯೇ ಸ್ತ್ರೀಯರು ತಮ್ಮ ತಮ್ಮ ಗಂಡಂದಿರಿಗೆ ಎಲ್ಲಾ ವಿಷಯಗಳಲ್ಲಿ ಅಧೀನರಾಗಿರಬೇಕು'' (5:23, 24). ರೇಖಾಚಿತ್ರದಲ್ಲಿ ಸ್ತ್ರೀಯು ಕ್ರಿಸ್ತನಿಗೂ, ಮತ್ತು ಗಂಡನಿಗೂ ಅಧೀನಳಾಗಿರುವ ದೃಷ್ಯವನ್ನು ತೋರಿಸಲಾಗಿದೆ.

ಮಕ್ಕಳು ಸಹ ತಂದೆತಾಯಿಗಳಿಗೆ ಅಧೀನರಾಗಿರಬೇಕು ಎಂದು ಇದೇ ವಾಕ್ಯವು ಪ್ರಚಾರಪಡಿಸುತ್ತದೆ: ''ಮಕ್ಕಳೇ ನೀವು ಕರ್ತನಲ್ಲಿರುವವರಿಗೆ ತಕ್ಕ ಹಾಗೆ ನಿಮ್ಮ ತಂದೆ ತಾಯಿಗಳ ಮಾತನ್ನು ಕೇಳಬೇಕು. ಇದು ಧರ್ಮ'' (ಎಫೆಸ 6:1). ರೇಖಾಚಿತ್ರದಲ್ಲಿ ಕಾಣಿಸಿರುವಂತೆ ಮಕ್ಕಳು ಕ್ರಿಸ್ತನಿಗೂ, ತಂದೆಗೂ, ಮತ್ತು ತಾಯಿಗೂ ಅಧೀನರಾಗಿರಬೇಕು.

ದೇವರು ಬಯಸುವಂಥ ಕುಟುಂಬ ಎಂದು ತೋರ್ಪಡಿಸಿಕೊಳ್ಳಲು, ಕುಟುಂಬದ ಪ್ರತಿಯೊಬ್ಬ ಸದಸ್ಯನು ತನ್ನ ದೇವರು - ದಯಪಾಲಿಸಿರುವ ಜವಾಬ್ದಾರಿಯನ್ನು ಕುಟುಂಬದಲ್ಲಿ

ನಿರ್ವಹಿಸಬೇಕು. ಕುಟುಂಬದ ಕುರಿತಾಗಿ ಈ ಕೆಳಕಂಡ ಹೇಳಿಕೆಗಳು ವಿನೋದವುಂಟು ಮಾಡತ್ತವೆ:

> ಅನಾರೋಗ್ಯ ದುರಾದೃಷ್ಟದ ಕುಟುಂಬ ಈ ರೀತಿ ಇರುತ್ತದೆ. ಕೂಗುವ ಹುಂಜವು ಮೌನದಾಗಿರುತ್ತದೆ. ಅಥವಾ ಮೊಟ್ಟೆ ಇಡುವ ಕೋಳಿಯು ಕೂಗುತ್ತದೆ; ಇದು ಸ್ವಭಾವಕ್ಕೆ ವಿರುದ್ಧವಾದದ್ದು. ಹಾಗೆಯೇ ಅಧೀನನಾದ ಗಂಡನು, ಯಜಮಾನಿಕೆ ತೋರುವ ಹೆಂಡತಿಯು ಇರುವವರಾಗಿರುತ್ತಾರೆ.

ನಾವು ಈ ವಾಕ್ಯವನ್ನು ಈ ದಿನ ಅನುಸರಣೆಗೆ ತರಬೇಕಾದರೆ, ಸ್ವಭಾವಕ್ಕೆ ವಿರೋಧ ವಾಗಿ ಒಂದು ವೇಳೆ ಮಕ್ಕಳು ಕುಟುಂಬವನ್ನು ಆಡಳಿತ ಮಾಡುತ್ತಿದ್ದರೆ ಅದನ್ನು ಸರಿಪಡಿಸಿಕೊಳ್ಳಬೇಕು.

ಮನೆಯ ಯಜಮಾನನಿಗೆ ಇರುವಂಥ ಪ್ರಾಮುಖ್ಯವಾದ ಪದ "ಜವಾಬ್ದಾರಿಯ ಹೊಣೆ" ಯಜಮಾನಿಕೆ ಅದು ಅವಕಾಶವಲ್ಲ, ಅದು ಜವಾಬ್ದಾರಿಯಾಗಿರುತ್ತದೆ. ದೈಹೀಕವಾಗಿಯೂ, ಆತ್ಮೀಕವಾಗಿಯೂ ಮುನ್ನಡೆಸಬೇಕಾದ ಜವಾಬ್ದಾರಿಯನ್ನು ಗಂಡನು ಗಂಭೀರವಾಗಿ ಪರಿಗಣಿಸಬೇಕು (6:4ನ್ನು ನೋಡಿ).

ನಮ್ಮ ಅಧ್ಯಾಯನದಲ್ಲಿ ಕಾಣಿಸಿರುವ ಜವಾಬ್ದಾರಿಯ ಹೊಣೆಯ ಕೆಳಮಟ್ಟದ್ದು ಅಥವಾ ಮೆಲ್ಮಟ್ಟದ್ದು ಎಂದು ಭಾವಿಸಬಾರದು.[2] ಸ್ತ್ರೀಯು ಕೆಳದರ್ಜೆಗೆ ಸೇರಿದವಳು ಎಂದು ಸತ್ಯವೇ ದವು ಎಲ್ಲಿಯೂ ಚಿತ್ರೀಕರಿಸಿರುವದಿಲ್ಲ ಜ್ಞಾನೋಕ್ತಿ 31ರಲ್ಲಿರುವ "ಯೋಗ್ಯ ಸ್ತ್ರೀಯರ ಕುರಿತಾಗಿ ಗಮನಿಸಿರಿ" ಆಕೆಯು ಸರಿಸಮಾನಳಾದ ಸ್ತ್ರೀಯಾಗಿದ್ದಳು! ಆಕೆಯು ಯಾವುದೇ ಸಂಘಟನೆಯಾಗಿರಲಿ, ಕೈಗಾರಿಕೆಯಾಗಿರಲಿ, ಕಾರ್ಯ ನಿರ್ವಹಿಸುವ ಕುಶಲತೆಯನ್ನು, ಮಾನವೀಯ ಸಂಬಂಧಗಳನ್ನು, ಬೋಧಿಸಲು ಆಕೆ ಶಕ್ತಳಾಗಿದ್ದಾಳೆ!

ಕುಟುಂಬದ ಸದಸ್ಯರೆಲ್ಲರೂ ದೇವರು ಅವರಿಗೆ - ನೇಮಿಸಿರುವ ಜವಾಬ್ದಾರಿಯನ್ನು ಕುಟುಂಬದಲ್ಲಿ ನಿರ್ವಹಿಸುವಾಗ ಕುಟುಂಬವು ಅದ್ಭುತವಾಗಿ ಕಾರ್ಯ ನಿರ್ವಹಿಸುತ್ತದೆ. ಈ ವಿಷಯವು ತಕ್ಷಣವೇ ಕುಟುಂಬದ ಎಲ್ಲಾ ಸಮಸ್ಯೆಗಳನ್ನು ಪರಿಹರಿಸದೆ, ಅಂತಿಮವಾದ ಯಶಸ್ಸಿಗೆ ನಡೆಸುತ್ತದೆ.

ಧೃಡವಾದ ಪ್ರಶ್ನೆಗಳು ಉದ್ಭವಿಸುತ್ತದೆ: "ಒಂದು ವೇಳೆ ಕುಟುಂಬದ ಕೆಲವರು ದೇವರು ನೇಮಿಸಿದ ಜವಾಬ್ದಾರಿಯ ಹೊಣೆಯನ್ನು ನಿರ್ವಹಿಸಿ, ಇತರರು ನಿರ್ವಹಿಸದೆ ಹೋದರೆ?"; "ಇತರರು ತಮ್ಮ ಹೊಣೆಯನ್ನು ಪಾಲಿಸದೆ ಇರುವಾಗ, ನಾನು ಹೇಗೆ ನಿರ್ವಹಿಸಲಿ?" 5:22ರಲ್ಲಿ ಪೌಲನು ಈ ಪ್ರಶ್ನೆಗಳಿಗೆ ಉತ್ತರಿಸಿ: ಪ್ರೋತ್ಸಾಹವನ್ನು ನೀಡುವದನ್ನು ಕಾಣುತ್ತೇವೆ. "ಸ್ತ್ರೀಯರೇ ನೀವು *ಕರ್ತನಿಗೆ* ಹೇಗೋ ಹಾಗೆಯೇ ನಿಮ್ಮ ನಿಮ್ಮ ಗಂಡಂದಿರಿಗೆ ಅಧೀನರಾಗಿರ್ರಿ" (ಒತ್ತಿ ಹೇಳಿದ್ದು ನನ್ನದು). 6:1ರಲ್ಲಿಯೂ ಅದೇ ಪ್ರಸ್ತಾಪವನ್ನು ಮಾಡಲಾಗಿದೆ: "ಮಕ್ಕಳೇ *ನೀವು ಕರ್ತನಲ್ಲಿರುವವರಿಗೆ* ತಕ್ಕಹಾಗೆ ನಿಮ್ಮ ತಂದೆ ತಾಯಿಗಳಿಗೆ ವಿಧೇಯರಾಗಿರ್ರಿ." ಇದು ತಂದೆತಾಯಿಗಳ ಮತ್ತು ಮಕ್ಕಳ ಮಧ್ಯದಲ್ಲಿರುವಂಥ ಸಂಬಂಧಗಳು. ಇದಕ್ಕೆ ಸಂಬಂಧಪಟ್ಟ ಇನ್ನೊಂದು ವಾಕ್ಯ ಕೊಲೊಸ್ಸೆ 3:23 ಈ ಆಲೋಚನೆಯನ್ನು ವಿವರಿಸುತ್ತದೆ: "ನೀವು ಯಾವ ಕೆಲಸವನ್ನು ಮಾಡಿದರೂ ಅದನ್ನು ಮನುಷ್ಯರಿಗೋಸ್ಕರವೆಂದು ಮಾಡದೇ ಕರ್ತನಿಗೋಸ್ಕರವೇ ಎಂದು ಮನಃ ಪೂರ್ವಕವಾಗಿ ಮಾಡಿರಿ" (KJV).

ಕ್ರಿಸ್ತನು ಸಭೆಯ ಮೇಲೆ ಇಟ್ಟಿರುವ ಪ್ರೀತಿಯ ದೃಷ್ಟಾಂತವನ್ನು ಕುಟುಂಬಕ್ಕೆ ಅನ್ವಹಿಸುವಂತೆ ಪೌಲನು ಸುಂದರವಾಗಿ ನೀಡಿದ್ದಾನೆ. ಸಭೆಯು ಯೋಗ್ಯವಾಗಿಯೇ ಇರಬೇಕೋ? ಸಭೆಯು ಯಾವಾಗಲೂ ನನಗೆ ಅಧೀನವಾಗಿಲ್ಲ ಎಂದು ಕ್ರಿಸ್ತನು ತಿಳಿಸಿದ್ದಾನೋ? ಇಲ್ಲ. "ಕೆಲವು ಸಾರಿ ಸಭೆಯನ್ನು ಅಪನಂಬಿಗಸ್ತರು ಎಂದು ತಿಳಿಸಿದ್ದಾನೆ - ನಾನು ಎಂದಿಗೂ, ಪ್ರೀತಿಯ ನಾಯಕತ್ವವನ್ನು ನೀಡುವದಿಲ್ಲ"? ಆತನು "ನಾನು ಸಭೆಯನ್ನು ಪ್ರೀತಿಸುವದಿಲ್ಲ

ಅದನ್ನು ಆಶೀರ್ವದಿಸುವ ಯಾವುದೇ ಕಾರ್ಯವನ್ನು ಮಾಡುವದಿಲ್ಲ ಎಂದು ಹೇಳಿದ್ದಾನೋ"? ಇಲ್ಲವೇ ಇಲ್ಲ.

ನಿಮ್ಮ ಮನೆಯಲ್ಲಿರುವ ಪ್ರತಿ ಸದಸ್ಯನು ತನ್ನ ಜವಾಬ್ದಾರಿಗಳನ್ನು ನಿರ್ವಹಿಸದೆ ಹೋದರೆ ಕುಟುಂಬವು ಯೋಗ್ಯವಾಗುವದಿಲ್ಲ. ಅಲ್ಲಿ ಏನೇ ಪರಿಸ್ಥಿತಿ ಇದ್ದರು ದೇವರು ಇಚ್ಛಿಸುವದನ್ನೇ ನೀನು ಮಾಡಬೇಕು.

## ಪ್ರೀತಿ (5:25, 28, 29, 33)

25ನೇ ವಚನವನ್ನು ಮತ್ತು ಅದರ ಹಿಂದಿನ ವಚನಗಳನ್ನು ನಾನು ಮೆಚ್ಚಿಕೊಳ್ಳುತ್ತೇನೆ, ಪೌಲನ ದಿವಸಗಳ ಪ್ರಪಂಚವನ್ನು ನಾವು ಅರ್ಥೈಸಿಕೊಳ್ಳಬೇಕು. ಯೆಹೂದ್ಯರ ಪ್ರಪಂಚದಲ್ಲಿ, ಹೆಂಡತಿಯನ್ನೂ, ಮದುವೆಯನ್ನೂ, ಮನೆಯನ್ನೂ ಮಾರ್ಮಿಕವಾಗಿ ಗೌರವಿಸಲಾಗುತ್ತಿತ್ತು; ಆದರೆ ಕ್ರಿಯೆಯಲ್ಲಿ ಅದು ಸಾಧ್ಯವಾಗಿರಲಿಲ್ಲ. ಯೆಹೂದ್ಯರು ತಮ್ಮ ಮುಂಜಾನೆಯ ಪ್ರಾರ್ಥನೆಯಲ್ಲಿ, ಅವರು ಅನ್ಯರಾಗದಿರುವದಕ್ಕೂ, "ಗುಲಾಮನಾಗದೆ ಇರುವದಕ್ಕೂ, ಸ್ತ್ರೀಯಾಗಿ[3] ಇಲ್ಲದೆ ಇರುವದಕ್ಕೂ ದೇವರಿಗೆ ಸ್ತೋತ್ರ ಮಾಡುತ್ತಿದ್ದರು." ಯೆಹೂದ್ಯರಲ್ಲಿ ವಿಚ್ಛೇಧನವು ಬಹಳ ಸರಳವಾಗಿರುತ್ತಿತ್ತು; ಚಿಕ್ಕ ಕಾರಣಕ್ಕಾಗಿ ಹೆಂಡತಿಯರನ್ನು ಪರಿತ್ಯಾಗ ಮಾಡುತ್ತಿದ್ದರು.

ಗ್ರೀಕರ ಪ್ರಪಂಚವು ಇನ್ನೂ ವಿಭಿನ್ನವಾಗಿತ್ತು, ವೇಶ್ಯಾವಾಟಿಕೆಯು ಗ್ರೀಕರ ಜೀವದ ಒಂದು ಅಂಗವಾಗಿತ್ತು. ಡೆಮೊಸ್ತೋನನು ಬರೆದಿರುವಂತೆ, "ಮೋಜಿಗಾಗಿ, ವೇಶ್ಯೆಯರನ್ನು ನಾವು ಹೊಂದಿದ್ದೇವೆ; ನಮ್ಮ ಚಟಗಳಿಗಾಗಿ ನಾವು ಉಪಪತ್ನಿಯರನ್ನು ಹೊಂದಿದ್ದೇವೆ; ನ್ಯಾಯಯುತವಾಗಿ ಮಕ್ಕಳನ್ನು ಪಡೆಯಲು ಹೆಂಡತಿಯರನ್ನು ಹೊಂದಿದ್ದೇವೆ; ನಮ್ಮ ಕುಟುಂಬದ ಸರ್ವ ಸಂಕ್ಷಣೆಗಾಗಿ ಅವರನ್ನು ಹೊಂದಿದ್ದೇವೆ."[4]

ರೋಮಾ ಸಾಮ್ರಾಜ್ಯವು ಇನ್ನೂ ಭಯಂಕರವಾಗಿತ್ತು. ಸೌಲನ ದಿವಸಗಳಲ್ಲಿ ರೋಮನ್ನರ ಕುಟುಂಬಗಳ ಜೀವಿತವು ಒಡೆದು ಹೋಗಿದ್ದವು. ಐದು ವರ್ಷಗಳ ಕಾಲಾವದಿಯಲ್ಲಿ ಏಳುಗಂಡಂದಿರನ್ನು ಹೊಂದಿದ್ದ ರೋಮಾ ಸ್ತ್ರೀಯ ಬಗ್ಗೆ ಒಬ್ಬ ಬರಹಗಾರನು ಬರೆದಿದ್ದಾನೆ. ಮತ್ತೊಬ್ಬ ಕ್ರೈಸ್ತ ಚರಿತ್ರೆಗಾರನು 23 ಗಂಡಂದಿರನ್ನು ಹೊಂದಿದ್ದ - ಒಬ್ಬ ಸ್ತ್ರೀಯ ಕುರಿತಾಗಿ ಬರೆದಿದ್ದಾನೆ, ಅವಳು 21ನೇ ಹೆಂಡತಿಯೆಂದು ತಿಳಿಸಿದ್ದಾಳೆ.

ಆ ದಿವಸಗಳಲ್ಲಿ, ಹೆಂಡತಿಯರಿಗೂ, ಮಕ್ಕಳಿಗೂ, ಕುಟುಂಬದಲ್ಲಿ ಯಾವುದೇ ವಿಧವಾಗಿ ಹಕ್ಕುಗಳಿರಲಿಲ್ಲ. ಅವರ ಕುರಿತಾದ ಎಲ್ಲಾ ನಿರ್ದಾರಗಳನ್ನು ಮನೆಯ ಯಜಮಾನನೇ ಮಾಡುತ್ತಿದ್ದನು.

ಈ ಹಿನ್ನೆಲೆಯಲ್ಲಿ, ಪೌಲನು ಬರೆಯುವದೇನೆಂದರೆ, "ಪುರಷರೇ, ಕ್ರಿಸ್ತನು ಸಭೆಯನ್ನು ಪ್ರೀತಿಸಿದ ಪ್ರಕಾರ ನಿಮ್ಮ ನಿಮ್ಮ ಹೆಂಡತಿಯರನ್ನು ಪ್ರೀತಿಸಿರಿ" (ವಚನ 25). ಪೌಲನ ದಿವಸಗಳಲ್ಲಿ ಜೀವಿಸಿದ ಒಬ್ಬ ಪ್ರತಿಭಾವಂಥ ಓದುಗನು ಈ ರೀತಿಯಾಗಿ ಪೌಲನಿಗೆ ಕೇಳಿರಬಹುದು, "ಗಂಡನು ಸಹ ಹೆಂಡತಿಯ ವಿಷಯದಲ್ಲಿ ಜವಾಬ್ದಾರಿಯುಳ್ಳವನಾಗಿದ್ದಾನೋ?" "ಅದು ಸರಿಯೇ" ಪೌಲನ ಪ್ರತ್ಯುತ್ತರ "ಮೊದಲನೆಯದಾಗಿ ಹೆಂಡತಿಯನ್ನು ಪ್ರೀತಿಸಬೇಕು." ಆ ಸತ್ಯವನ್ನು ನಾವುಗಳು ಕೆಳಮಟ್ಟದಲ್ಲಿದೆ ಎಂದು ತಿಳಿಯದಂತೆ, ಪೌಲನು ಮೂರು ಸಾರಿ ನಮ್ಮ ಪಾಠದಲ್ಲಿ ತಿಳಿಸಿದ್ದಾನೆ:

> ಪುರುಷರೇ ಕ್ರಿಸ್ತನು ಸಭೆಯನ್ನು ಪ್ರೀತಿಸಿದ ಮೇರೆಗೆ ನಿಮ್ಮ *ನಿಮ್ಮ ಹೆಂಡತಿಯರನ್ನು* ಪ್ರೀತಿಸಿರಿ (ವಚನ 25; ಒತ್ತಿ ಹೇಳಿದ್ದು ನನ್ನದು).

> ಹಾಗೆಯೇ ಪುರುಷರು ಸಹ ಸ್ವಂತ ಶರೀರವನ್ನು ಪ್ರೀತಿಸಿಕೊಳ್ಳುವ ಪ್ರಕಾರವೇ *ತಮ್ಮ ಹೆಂಡತಿಯರನ್ನು ಪ್ರೀತಿಸುವ* ಹಂಗಿನವರಾಗಿದ್ದಾರೆ (ವಚನ 28ಎ; ಒತ್ತಿ ಹೇಳಿದ್ದು

ನನ್ನದು).

> ನಿಮ್ಮಲ್ಲಿ ಪ್ರತಿ ಪುರುಷನು ತನ್ನನ್ನು ಪ್ರೀತಿಸಿಕೊಳ್ಳುವಂತೆಯೇ *ತನ್ನ ಹೆಂಡತಿಯನ್ನು ಪ್ರೀತಿಸಬೇಕು* (ವಚನ 33ಎ; ಒತ್ತಿ ಹೇಳಿದ್ದು ನನ್ನದು).

ಪುರುಷನು *ಯಾವ* ರೀತಿಯಲ್ಲಿ ತನ್ನ ಹೆಂಡತಿಯನ್ನು ಪ್ರೀತಿಸಬೇಕು? "ಕ್ರಿಸ್ತನು ಸಭೆಯನ್ನು ಪ್ರೀತಿಸಿದಂತೆ" ಯಾವ ರೀತಿಯಾದ ಪ್ರೀತಿಯನ್ನು ಕ್ರಿಸ್ತನು ಸಭೆಗೆ ತೋರಿಸಿದ್ದಾನೆ (ತೋರಿಸುತ್ತಿದ್ದಾನೆ) ಕೀಳಾದ "ಪ್ರೀತಿಯೇ"? ಸೇಡಿನ "ಪ್ರೀತಿಯೇ" ಸ್ವಾರ್ಥದ ಪ್ರೀತಿಯೇ; ತಾನೇ ಹೆಚ್ಚಿನವನು ಎಂಬುದಾಗಿ ಅಧಿಕಾರದ ನಿಯಮಗಳಿಂದ ತುಂಬಿದ ಭಾರವಾದ "ಪ್ರೀತಿಯೇ"? ಇಲ್ಲ! ಆತನ ಪ್ರೀತಿ ನಿಸ್ವಾರ್ಥವಾದ ಪ್ರೀತಿ, "ಆ ಮಹಾ ಪ್ರೀತಿಯ ನಿಮಿತ್ತದಿಂದ ತನ್ನ ಪ್ರಾಣವನ್ನೇ ಸಭೆಗಾಗಿ ಒಪ್ಪಿಸಿಬಿಟ್ಟನು."

ವಚನ 28ಕ್ಕೆ ವಚನ 29ನ್ನು ಸೇರಿಸಿ, "ಪುರುಷನು ತನ್ನ ದೇಹವನ್ನು ಪ್ರೀತಿಸುವಂತೆಯೇ ತನ್ನ ಹೆಂಡತಿಯನ್ನು ಪ್ರೀತಿಸಬೇಕು. ಯಾರೂ ಎಂದೂ ಸ್ವಶರೀರವನ್ನು ಹಾಗೆ ಮಾಡಿದ್ದಿಲ್ಲ; ಎಲ್ಲರೂ ತಮ್ಮ ಶರೀರಗಳನ್ನು ಪೋಷಿಸಿ ಸಂರಕ್ಷಿಸುತ್ತಾರೆ. ಸಭೆಯೆಂಬ ದೇಹವನ್ನು ಕ್ರಿಸ್ತನು ಹಾಗೆಯೇ ಪೋಷಿಸಿ ಸಂರಕ್ಷಿಸುತ್ತಾನಲ್ಲಾ." ಯೇಸು ತನ್ನ ದೇಹಕ್ಕಿಂತಲೂ *ಹೆಚ್ಚಾಗಿ* ಸಭೆಯನ್ನು ಪ್ರೀತಿಸಿದನು - ಶಿಲುಬೆಯ ಮರಣದ ಮೂಲಕ ಸಭೆಯನ್ನು ಯೇಸು, ತನಗಾಗಿ ಕೊಂಡುಕೊಂಡಿದ್ದಾನೆ!

ನಾವು ಧ್ಯಾನ ಮಾಡುತ್ತಿರುವ ಅಧ್ಯಾಯದ ಕುರಿತಾಗಿ ಆದಿ ಬರಹಗಾರನಾದ ಕ್ರೀಸೋಸ್ಟಮ್ ಎಂಬವನು ಈ ರೀತಿಯಾಗಿ ವಿಮರ್ಶೆಮಾಡಿದ್ದಾನೆ:

> ವಿಧೇಯತೆಯ ಅಳತೆಯನ್ನು ನೀನು ನೋಡಿರುವೆಯಾ? ನೀನು ಪ್ರೀತಿಯ ಅಳತೆಯನ್ನು ಗಮನಿಸು. ಸಭೆಯು ಕ್ರಿಸ್ತನಿಗೆ ಅಧೀನವಾದಂತೆ ನಿನ್ನ ಹೆಂಡತಿ ನಿನಗೆ ಅಧೀನಳಾಗಬೇಕೋ? ಕ್ರಿಸ್ತನು ಸಭೆಯನ್ನು ಪೋಷಿಸಿದಂತೆ ನೀನು ನಿನ್ನ ಹೆಂಡತಿಯನ್ನು ಪೋಷಿಸುತ್ತೀಯೋ, ಅವಶ್ಯವಿದ್ದರೆ ನೀನು ನಿನ್ನ ಹೆಂಡತಿಗಾಗಿ ಪ್ರಾಣವನ್ನೇ ನೀಡಬೇಕಾಗುತ್ತದೆ. ಆಕೆಗಾಗಿ ಸಾವಿರ ತುಂಡುಗಳಾಗಬೇಕಾಗುತ್ತದೆ. ಅಥವಾ ಏನಾದರೂ, ಅದನ್ನು ನೀನು ಸಹಿಸಿಕೊಳ್ಳಬೇಕು, ತಿರಸ್ಕರಿಸಬೇಡ .... ಯೇಸು ತನ್ನ ಮಹಾ ಸಂರಕ್ಷಣೆಯಿಂದ ಸಭೆಯನ್ನು ತನ್ನ ಸನ್ನಿಧಿಗೆ ತಂದಿದ್ದಾನೆ. ಭಯ ಪಡಿಸುವದರಿಂದಾಗಲಿ; ಅಪಾಯ ಒಡ್ಡುವದರಿಂದಾಗಲೀ, ಅಲ್ಲಿ ನಿನ್ನ ಹೆಂಡತಿಯ ಮುಂದೆ ಹಾಗೆ ನಡೆದುಕೊಳ್ಳುತ್ತಿ.[5]

ಕೆಲವು ಸ್ತ್ರೀಯರು ತಮ್ಮ ಗಂಡಂದಿರಿಗೆ ಅಧೀನರಾಗುವದಿಲ್ಲ. ಅದು ಅವರು ತಮ್ಮ ಗಂಡಂದಿರಿಗೆ ತೊರಿಸುವ ಪ್ರೀತಿ!

ಈ ರೀತಿಯಾದಂಥ, ಪ್ರೀತಿಯ ಸದ್ಗುಣಗಳು ನಮ್ಮ ಕುಟುಂಬದ ಸಂಬಂಧಗಳಲ್ಲಿ ಇರಬೇಕಾದದ್ದೇ ಸ್ತ್ರೀಯರು ತಮ್ಮ ಗಂಡಂದಿರನ್ನು ಪ್ರೀತಿಸಬೇಕು: ತಂದೆತಾಯಿಗಳು ತಮ್ಮ ಮಕ್ಕಳನ್ನು ಪ್ರೀತಿಸಬೇಕು; ಮಕ್ಕಳು ತಮ್ಮ ತಂದೆತಾಯಿಗಳನ್ನು ಪ್ರೀತಿಸಬೇಕು, "ಪ್ರಾಯದ ಸ್ತ್ರೀಯರು ತಮ್ಮ ಗಂಡಂದಿರನ್ನು ಪ್ರೀತಿಸಬೇಕು, ಮಕ್ಕಳನ್ನು ಸಹ ಪ್ರೀತಿ ಸಬೇಕು" ಎಂದು ಬೋಧನೆ ಮಾಡಲು, ಪೌಲನು ತೀತನಿಗೆ ಪ್ರಬೋಧಿಸಿದ್ದಾನೆ (ತೀತ 2:4). ಪ್ರೀತಿಯೇ ಕುಟುಂಬದ ಹೃದಯವಾಗಿರುತ್ತದೆ.

## ಪರಿಶುದ್ಧತೆ (5:25-27)

ವಚನ 25ರಿಂದ 27ರವರೆಗೆ ತಿಳಿಸುವದೇನೆಂದರೆ ಕ್ರಿಸ್ತನು ತನ್ನ ಪ್ರೀತಿಯ ಸಂಬಂಧದ

ಮೂಲಕವಾಗಿ ತನ್ನ ಆತ್ಮೀಕವಾದ ಸಭೆಯನ್ನು ಸಂಧಿಸುವವನಾಗಿದ್ದಾನೆ:

> ... ಪುರುಷರೇ, ಕ್ರಿಸ್ತನು ಸಭೆಯನ್ನು ಪ್ರೀತಿಸಿದ ಪ್ರಕಾರವೇ ನಿಮ್ಮ ನಿಮ್ಮ ಹೆಂಡತಿಯರನ್ನು ಪ್ರೀತಿಸಿರಿ; ಆತನು *ಅದನ್ನು* ಪ್ರತಿಷ್ಠೆಪಡಿಸುವದಕ್ಕಾಗಿ ತನ್ನನ್ನು ಒಪ್ಪಿಸಿಕೊಟ್ಟನು. ಅದನ್ನು ಕಳಂಕ ಸುಕ್ಕು ಮುಂತಾದ್ದೊಂದೂ ಇಲ್ಲದ ಕನ್ನಿಕೆಯೋ ಎಂಬಂತೆ ಪರಿಶುದ್ಧವೂ ನಿರ್ದೋಷವೂ ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ ನಿಲ್ಲಿಸಿಕೊಳ್ಳಬೇಕೆಂದು ವಾಕ್ಯೋಪದೇಶ ಸಹಿತವಾದ ಜಲ ಸ್ನಾನವನ್ನು ಮಾಡಿಸಿ ಶುದ್ಧ ಮಾಡಿದನು. (ಒತ್ತಿ ಹೇಳಿದ್ದು ನನ್ನದು.)

ಪದಗಳ ಅರ್ಥವನ್ನು ತಿಳಿದುಕೊಳ್ಳೋಣ "ಕಳಂಕ ಸುಕ್ಕು ಮುಂತಾದೊಂದು ಇಲ್ಲದ ಕನ್ನಿಕೆಯಂತೆ." ಕ್ರಿಸ್ತನು ಸಹ ಪರಿಶುದ್ಧವೂ, ನಿರ್ದೋಷವೂ, ನಂಬಿಗಸ್ತನೂ ಆಗಿರುವಂತೆ, ಸಭೆಯೆಂಬ ಕನ್ಯೆಯೂ ಸಹ ನಂಬಿಗಸ್ತವಾಗಿರಬೇಕೆಂದು ಆತನು ಬಯಸುತ್ತಾನೆ.

ಈ ದಿನಗಳಲ್ಲಿ ಅನೇಕ ಸಂದೇಶಗಳನ್ನು ಕಳುಹಿಸಿದ್ದೇವೆ. ಅದೇನೆಂದರೆ "ಧರ್ಮನಿಂದನೆಯು ವಿವಾಹಕ್ಕೆ ಯಾವ ತೊಂದರೆಯನ್ನು ಮಾಡಲಾರದು; ಕೆಲವು ಸಂದರ್ಭಗಳಲ್ಲಿ ಅದು ಉತ್ತಮವೇ ಎಂದು ಪ್ರತಿಪಾದಿಸುವದುಂಟು." "ಇದು ಸೈತಾನನು ಹೇಳುವಂಥ ಸುಳ್ಳಾಗಿರುತ್ತದೆ." ಒಬ್ಬರಿಗೊಬ್ಬರು ಅಧೀನರಾಗಿದ್ದರೆ ಮಾತ್ರ ಮದುವೆಯ ಜೀವನವು ಪರಿಪಕ್ವತೆಗೆ ಬೆಳೆಯುತ್ತದೆ - ಈ ಮದುವೆಯ ಸಂಬಂಧವು ಮದುವೆ ಮಾಡಿಕೊಂಡ ವ್ಯಕ್ತಿಗಳಿಗೆ ಮಾತ್ರ ಸಂಬಂಧವುಳ್ಳದ್ದು ಇಬ್ಬರೂ ಸಹ ಸಂದೇಹವಿಲ್ಲದೆ ಇದನ್ನು ಒಪ್ಪಿಕೊಳ್ಳಬೇಕು.

ಇಬ್ರಿಯ ಬರಹಗಾರನು ಸರಳವಾಗಿ ಬರೆಯುವುದೇನೆಂದರೆ, "ಗಂಡ, ಹೆಂಡತಿಯರ ಸಂಬಂಧವು ನಿಷ್ಕಲಂಕವಾಗಿರಬೇಕು, ಜಾರರಿಗೂ ವ್ಯಭಿಚಾರಿಗಳಿಗೂ ದೇವರು ನ್ಯಾಯತೀರಿಸುವನೆಂದು ತಿಳುಕೊಳ್ಳಿರಿ" (ಇಬ್ರಿಯ 13:4).

## ಬೆಳವಣಿಗೆ (5:26, 27)

ವಚನ 26 ಮತ್ತು 27ರಲ್ಲಿ ಅಡಗಿರುವ ಸತ್ಯವನ್ನು ಮುಂದುವರಿಸಿಕೊಳ್ಳೋಣ: ನಾವು ಪರಿಶುದ್ಧರೂ, ನೀತಿವಂತರೂ ಆಗಿರಬೇಕೆಂದು, ನಮ್ಮನ್ನು ಪ್ರೀತಿಸಿದ್ದಾನೆ. ಆದರೆ ನಾನು ಇನ್ನೂ ಆ ಸದ್ಗುಣಗಳನ್ನು ಹೊಂದಿಕೊಂಡಿರುವದಿಲ್ಲ. ನಾವು ಈ ರೀತಿ ಇರಬೇಕೆಂದು ಕ್ರಿಸ್ತನು ನಮ್ಮನ್ನು ಈ ಮೂಲಕ ಪ್ರೋತ್ಸಾಯಿಸುತ್ತಾನೆ. ನಾವು ಯಾವ ರೀತಿ ಆಗಬೇಕೋ, ಆ ರೀತಿಯಾಗುವದಕ್ಕೆ ಸಮಯದ ಅವಶ್ಯವಿದೆ; ಮತ್ತು *ಬೆಳೆಯುವ* ಅವಶ್ಯವಿದೆ.

ಮದುವೆಗೂ ಕಟುಂಬಕ್ಕೂ ನೇಮಿಸಿರುವ ನಿಯಮಗಳೇನು? ನಾವು ಅನೇಕರು ಮದುವೆಯಾದ ನಂತರ, ನಮ್ಮ ಮದುವೆಯ ಕುರಿತ ಪಟ್ಟಿಗಳನ್ನು ಮಾಡುತ್ತೇವೆ. ಮತ್ತು ನಿಯಮಗಳ ಅನುಸಾರ ಹಣವನ್ನೂ ಸಮಯವನ್ನೂ ವ್ಯಯಮಾಡಿ, ನಮ್ಮ ಜೊತೆಗಾರರನ್ನು ಗೆದ್ದುಕೊಂಡಿದ್ದೇವೆ; (ನಾವು ಯೋಚಿಸುತ್ತೇವೆ) ಈಗ ಮದುವೆಯ ವಿಷಯವನ್ನು ಮರೆತು ಕುಟುಂಬದ ಯಶಸ್ಸಿನ ಕಡೆಗೆ ನಿಗಾವಹಿಸುವವರಾಗಿದ್ದೇವೆ. ನಮಗೆ ಒಂದು, ಎರಡು ಅಥವಾ ಮೂರು ಮಕ್ಕಳಾಗಬಹುದು, ಅಥವಾ ಇನ್ನೂ ಹೆಚ್ಚು ಮಕ್ಕಳಾಗಬಹುದು. ಅವರನ್ನು ವಾಕ್ಯದ ಧ್ಯಾನಕ್ಕೂ ಆರಾಧನೆಗೂ, ಕರೆದುಕೊಂಡು ಹೋಗುವ ಮೂಲಕ ಜವಾಬ್ದಾರಿಯ ಹೊಣೆಯಲ್ಲಿ ಯಶಸ್ಸನ್ನು ಸಾಧಿಸಿದ್ದೇವೆ ಎಂದು ತಿಳಿದುಕೊಳ್ಳುತ್ತೇವೆ.

ಸಂಬಂಧಗಳು ಬೆಳವಣಿಗೆಯನ್ನು ಕಾಣಬೇಕು. ಇದನ್ನು ನಾವು ಅರ್ಥೈಸಿಕೊಳ್ಳಬೇಕು ಬೆಳವಣಿಗೆಗೆ ಸಮಯದ ಅವಶ್ಯವಿದೆ. ಕುಟುಂಬವನ್ನು ಯೋಗ್ಯಸ್ಥಿತಿಗೆ ನಡೆಸಲು ಪ್ರಯತ್ನದ ಅವಶ್ಯವಿದೆ ಕುಟುಂಬದಲ್ಲಿ ಉದ್ಭವಿಸುವ ಯಾವುದೇ ಸಮಸ್ಯೆಯನ್ನು ಎದುರಿಸಲು ಕುಟುಂಬದ ಸದಸ್ಯರೆಲ್ಲರೂ ಸಿದ್ಧರಾಗಬೇಕಾಗುತ್ತದೆ. ದೇವರ ಸಹಾಯದಿಂದ, ಅವುಗಳನ್ನು

ಪರಿಹರಿಸಿಕೊಳ್ಳಬೇಕಾಗುತ್ತದೆ.

## ಶಾಶ್ವತ ಸ್ಥಿತಿ (5:31; 6:3)

ಪರಿಚಯವಿರುವಂತಹ ವಚನ 31ರ ಮೂಲಕ, ವಚನವಾದ ಆದಿಕಾಂಡ 2:24ನ್ನು ಯೇಸು ಕ್ರಿಸ್ತನು ಮತ್ತಾಯ 19:5ರಲ್ಲಿ ತೋರ್ಪಡಿಸಿದ್ದಾನೆ: "ಈ ಕಾರಣದಿಂದ ಪುರಷನು ತಂದೆ ತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು. ಅವರಿಬ್ಬರು ಒಂದೇ ಶರೀರವಾಗಿರುವರು." (ಮಾರ್ಕ 10:7, 8 ನೋಡಿರಿ.) ಈ ಹೇಳಿಕೆಯಲ್ಲಿ ಅನೇಕ ದೊಡ್ಡ ಸತ್ಯಾಂಶಗಳನ್ನು ಕಾಣುತ್ತೇವೆ: ಆದರೆ ಇದರಲ್ಲಿ ಇರುವ ಶಾಶ್ವತ ಸ್ಥಿತಿಯನ್ನು ಮಾತ್ರ ಧ್ಯಾನಿಸೋಣ.

ಸಂಬಂಧಗಳಲ್ಲಿ ಸಮಸ್ಯೆಯು ಇರುವಂಥದ್ದು ಸಹಜವಾಗಿದೆ, ಅದರ ಅರ್ಥ ಗಂಡನಾದವನು, "ಉಗ್ರವಾಗಿ" ಪ್ರತಿಕ್ರಿಯಿಸಿ ತನ್ನ ಯೌವನ ಕಾಲದ ಪತ್ನಿಯನ್ನು ಹೊರಹಾಕಬೇಕು ಎಂಬುದಾಗಿ ಅಲ್ಲ (ಮಲಾಕಿಯ 2:14). ಮತ್ತು ಹೆಂಡತಿಯರೂ ಸಹ ಪತಿಯ ಕುರಿತಾಗಿ ಉಗ್ರವಾಗಿರಬೇಕು, ಎಂಬುದಾಗಿ ಅಲ್ಲ ಪತ್ನಿತ್ಯಾಗವನ್ನು ದೇವರು ಹೇಳಿಸುತ್ತಾನೆ (ಮಲಾಕಿಯ 2:16). ಯೇಸು ಪ್ರತಿ ಪಾದಿಸುವದೇನೆಂದರೆ, "ದೇವರು ಕೂಡಿಸಿದ್ಧನ್ನು ಮನುಷ್ಯರು ಅಗಲಿಸಬಾರದು" (ಮತ್ತಾಯ 19:6ಬಿ).

ಅನೇಕ ಮಕ್ಕಳು ಮನೆಯನ್ನು ತೊರೆದು ಹೊರ ಹೋಗುತ್ತಾರೆ (ಮತ್ತಾಯ 19:5), ಆದರೆ ಅವರ ತಂದೆತಾಯಿಗಳ ದಾಂಪತ್ಯ ಜೀವನವು ಧೃಡವಾಗಿದ್ದರೆ ಅವರಿಗೆ "ಮನೆಗೆ ಹಿಂದಿರುಗಲು" ಇದು ಒಂದು ಅವಕಾಶವಿರುತ್ತದೆ. ಎಫೆಸ 6:3ರ ಸತ್ಯ ಅವರಿಗೆ ಒಂದು ಅರ್ಥವನ್ನು ನೀಡುತ್ತದೆ; ಅವರು ಮನೆಗೆ ಹಿಂದಿರುಗುವಾಗ ಕುಟುಂಬದಲ್ಲಿ ಎಲ್ಲವೂ "ವ್ಯವಸ್ಥಿತವಾಗಿರುವುದನ್ನು" ಕಾಣುವರು.

## ಸನ್ಮಾನ (5:21, 28, 33; 6:2, 4)

ಈ ವಾಕ್ಯಭಾಗದಲ್ಲಿ ಸನ್ಮಾನಿಸುವ ಕುರಿತಾಗಿ ಅಧ್ಯಾಯನ ಮಾಡುತ್ತಿದ್ದೇವೆ ("ಯೇಸುವಿನ ಮೇಲಿರುವ ಭಯ ಭಕ್ತಿಯಿಂದ") ಸನ್ಮಾನಿಸು ಎಂಬ ಆಜ್ಞೆಯಿಂದ ಇದು ಅಂತ್ಯವಾಗುತ್ತದೆ ("ಸ್ತ್ರೀಯು ತನ್ನ ಗಂಡನನ್ನು ಸನ್ಮಾನಿಸಲಿ"). 5:21ರಲ್ಲಿ ಇರುವ "ಭಯ" ಎಂಬುದು ನಾಮಪದವಾಗಿದೆ 5:33ರ ಸನ್ಮಾನ ಅಥವಾ ಭಯಭಕ್ತಿ ಎಂಬುದು ಕ್ರಿಯಾಪದವಾಗಿದೆ; ಆದರೆ ಈ ಎರಡು ಪದಗಳು ಗ್ರೀಕ್‌ಭಾಷೆಯಲ್ಲಿ ಒಂದೇ ಮೂಲ ಪದಗಳಾಗಿರುತ್ತವೆ. ಅದರ ಅರ್ಥ "ಆಳವಾದ ಹೃದಯಪೂರ್ವವಾದ ಸನ್ಮಾನ."[6]

ಎಫೆಸ 5:21-6:4ರಲ್ಲಿ, ಮೂರು ವಿಧವಾದ ಸಂಬಂಧಗಳಲ್ಲಿ "ಸನ್ಮಾನ" ಎಂಬ ಪದ ಪ್ರಯೋಗ ಮಾಡಲಾಗಿದೆ: ಎಲ್ಲರೂ ಕ್ರಿಸ್ತನಿಗೆ ಭಯಭಕ್ತಿ ತೋರಿಸಬೇಕು (5:21), ಹೆಂಡತಿಯರು, ಗಂಡಂದಿರಿಗೆ ಭಯಭಕ್ತಿತೋರಿಸಬೇಕು (5:33), ಮತ್ತು ಮಕ್ಕಳು ತಂದೆ ತಾಯಿಗಳನ್ನು ಸನ್ಮಾನಿಸಬೇಕು (6:2). ಕುಟುಂಬದ ಸಕಲ ಸಂಬಂಧಗಳಲ್ಲಿ ಭಯ ಭಕ್ತಿಯ ಪ್ರಧಾನವಾ ಗಿರಬೇಕು: "ಪುರುಷನು *ತನ್ನನ್ನು* ಪ್ರೀತಿಸಿಕೊಳ್ಳುವಂತೆ ತನ್ನ ಹೆಂಡತಿಯನ್ನು ಪ್ರೀತಿಸಬೇಕು" (5:33; ಒತ್ತಿ ಹೇಳಿದ್ದು ನನ್ನದು). ಅದು ಹೆಂಡತಿಗೆ ಗೌರವ ನೀಡುವ ವಿಷಯವನ್ನು ಸಹ ಸೂಚಿಸುತ್ತದೆ. "ತಂದೆಗಳೇ ನಿಮ್ಮ ಮಕ್ಕಳಿಗೆ ಕೋಪವನ್ನೆಬ್ಬಿಸಬೇಡಿರಿ" (6:4ಎ), ಎಂಬ ಮಾತು, ಮಕ್ಕಳನ್ನೂ ಸಹ ಸನ್ಮಾನಿಸಬೇಕು ಎಂಬ ಸೂಚನೆಯಾಗಿರುತ್ತದೆ.

ಕ್ರೈಸ್ತರಾದ ನಾವು ಕುಟುಂಬದಲ್ಲಿರುವ ಪ್ರತಿಯೊಬ್ಬರನ್ನು ಸನ್ಮಾನಿಸುವ ಹಂಗಿನಲ್ಲಿದ್ದೇವೆ: ಅವರುಗಳು ನಮ್ಮ ಜೊತೆಯ ಮಾನವರು ಎಂದು ತಿಳಿದು ಸನ್ಮಾನಿಸಬೇಕು. ನಮ್ಮ ಕುಟುಂಬಕ್ಕೆ ಸೇರಿದವರಾಗಿರುವದರಿಂದ ಅವರನ್ನು

ಸನ್ಮಾನಿಸಬೇಕು ಎಲ್ಲರೂ ಕ್ರೈಸ್ತರಾಗಿದ್ದರೆ, ಅವರನ್ನು ಕ್ರಿಸ್ತನಲ್ಲಿ ಸಹೋದರ, ಸಹೋದರಿ ಯೆಂದು ತಿಳದು ಸನ್ಮಾನಿಸಬೇಕು. ನನ್ನ ಕೊನೆಯ ತಂಗಿಯಾದ ಆ್ಯಂಗಿಯು, ಒಂಬತ್ತನೇ ವಯಸ್ಸಿನಲ್ಲಿ ಕ್ರೈಸ್ತಳಾದಳು. ಅವಳು ದೀಕ್ಷಾಸ್ನಾನ ಮಾಡಿಸಿಕೊಂಡು ಮೇಲೆ ಬರುವಾಗ, ಅವಳ ಒದ್ದೆಯಾದ ನಡುಗುತ್ತಿದ ದೇಹದ ಮೇಲೆ ನನ್ನ ಕೈಗಳನ್ನು ಇಡುವಾಗ ಅವಳೊಂದಿಗೆ ನೂತನ ಸಂಬಂಧ ಉಂಟಾಯಿತು. ರೋಪರ್ ಕುಟುಂಬದಲ್ಲಿ ತಂದೆ/ಮಗಳ ಸಂಬಂಧದ ಜೊತೆಗೆ, ಕರ್ತನ ಕುಟುಂಬದ ಸಂಬಂಧದಲ್ಲಿ ಸಹೋದರ/ಸಹೋದರಿಯರಾದೆವು.

ಕುಟುಂಬದ ಅಂಗಗಳಾಗಿ, ಪರಸ್ಪರ ಸನ್ಮಾನ ಮಾಡುವುದು ಅದ್ಭುತವಾಗಿರುತ್ತದೆ. ಗಂಡಂದಿರೇ ಹೆಂಡತಿಯ ಬಗ್ಗೆ ಕೀಳಾಗಿ ಮಾತನಾಡಬೇಡಿರಿ. ಸ್ತ್ರೀಯರೇ ನಮ್ಮ ಗಂಡಂದಿರ ಬಲಹೀನತೆಗಾಗಿ ವ್ಯಂಗ ಮಾಡಬೇಡಿರಿ, ತಂದೆ ತಾಯಿಗಳೇ ನಿಮ್ಮ ಮಕ್ಕಳನ್ನು ಮೂರ್ಖ ರೆಂದು ಎಣಿಸಬೇಡಿರಿ. ಮಕ್ಕಳೇ ನಿಮ್ಮ ಪ್ರಿಯ ತಂದೆ ತಾಯಿಗ ಳೊಂದಿಗೆ, ಸಂಯಮದಿಂದಲೂ, ಗೌರವದಿಂದಲೂ ವರ್ತಿಸಿರಿ.

## ಮುಕ್ತಾಯ

ದೇವರು ಬಯಸುವಂಥ ಕುಟುಂಬ ಯಾವುದು? ಅದು ನಿಸ್ವಾರ್ಥದ ಸ್ಥಳ ಅದು ಪೂಜ್ಯಭಾವವುಳ್ಳದ್ದು. ಅದು ಜವಾಬ್ದಾರಿಯ ಹೊಣೆ ಹೊರುವಂಥದ್ದು. ಪ್ರೀತಿಯುಳ್ಳದ್ದು ಬೆಳೆ ಯುವಂಥದ್ದು, ಶಾಶ್ವತವಾದದ್ದು, ಮತ್ತು ಸಾನ್ಮಾನ ಮಾಡುವಂಥದ್ದು. ಈ ರೀತಿಯಾದ ಕುಟುಂಬದಲ್ಲಿ ಇರುವಂಥವರು ತಮ್ಮ ತಮ್ಮ ಕ್ರಿಯೆಗಳನ್ನು ಸರಿಯಾದ ರೀತಿ ಮಾಡತಕ್ಕದ್ದು. ನಾವು ಯಾವ ಪ್ರಕಾರ ಇರಬೇಕು ಅದೇ ಪ್ರಕಾರ ಇರತಕ್ಕದ್ದು.

ಒಂದು ಸಾರಿ, ನಾನು ಈ ಅಧ್ಯಾಯನವನ್ನು ಪ್ರಸಂಗಿಸಿದಾಗ ಒಬ್ಬ ಸ್ತ್ರೀ ನನ್ನ ಬಳಿಗೆ ಬಂದು "ಈ ಪ್ರಸಂಗವನ್ನು ಯಾರಾದರೂ ದಾಖಲು ಮಾಡಿದ್ದಾರೋ? ಎಂದು ಕೇಳಿದಳು. ಇದರ ನಕಲನ್ನು ನನ್ನ ಗಂಡನಿಗೆ ನೀಡಬೇಕು! ಇದನ್ನು ಕೇಳುವಂತೆ ಮಾಡುತ್ತೇನೆ!" ಈ ಪಾಠವು ನಿನ್ನ ಅರ್ಧಾಂಗಿಗಾಗಲಿ ಅಥವಾ ಮಕ್ಕಳಿಗಾಗಲಿ ಸಹಾಯಮಾಡಲಾರದು ಅದು *ನಿನಗೆ* ಸಹಾಯ ಮಾಡುತ್ತದೆ, "ನನ್ನ ಮನೆಯನ್ನು ಹೇಗೆ ಉತ್ತಮಪಡಿಸಲಿ ಎಂದು ಪ್ರಶ್ನಿಸಿಕೋ? ನಾನು ನನ್ನ ಕುಟುಂಬದಲ್ಲಿ ಸಂಬಂಧ ಗಳನ್ನು ಹೇಗೆ ಅಭಿವೃದ್ಧಿ ಪಡಿಸಿಕೊಳ್ಳಲಿ?"

ನೀನು ಇನ್ನೂ ಕ್ರೈಸ್ತನಾಗಿರದಿದ್ದರೆ ಮೊದಲು ನೀನು ದೇವರ ಮಗುವಾಗಿ ಮಾರ್ಪಡುವುದು ನಿನ್ನ ಮೊದಲ ಆದ್ಯತೆ (ಮಾರ್ಕ 16:16; ಅಪೋಸ್ತಲಕೃತ್ಯಗಳು 2:38). ನೀನು ಅಪನಂಬಿಗಸ್ತನಾದ ಕ್ರೈಸ್ತನಾಗಿದ್ದರೆ, ದೇವರ ಕಡೆಗೂ ಆತನ ಸಭೆಯ ಕಡೆಗೂ ಹಿಂದಿರುಗು (ಅಪೋಸ್ತಲಕೃತ್ಯಗಳು 8:22; ಯಾಕೋಬ 5:16). ನೀನು ವಿದೇಯನಾಗಲು, ಇದೇ ತಕ್ಕ ಸಮಯ.[7]

---

ಟಿಪ್ಪಣಿಗಳು

[1]David Lipscomb, "Ephesians, Philippians, and Colossians," in *A Commentary on the New Testament Epistles,* ed. J. W. Shepherd (Nashville: Gospel Advocate Co., 1960), 4:117. [2]ನಾನು ವೇಗವಾಗಿ ವಾಹನವನ್ನು ಚಲಿಸುವಾಗ ಪೋಲಿಸ್ ನನ್ನನ್ನು ಅಡ್ಡಗಟ್ಟಿದರೆ, ಅವನು ನನಗಿಂತಲೂ ಮೇಲ್ದರ್ಜೆಯವನು ಎಂಬುದಾಗಿ ಅಲ್ಲ. ನಾನು ಅವನಿಗೆ ಕೀಳುಮಟ್ಟದವನೂ ಆಗುವದಿಲ್ಲ. ಆದರೆ ಆ ಪರಿಸ್ಥಿತಿಯಲ್ಲಿ ಅವನಿಗೆ ನನ್ನ ಮೇಲೆ ಅಧಿಕಾರವಿರುತ್ತದೆ (ರೋಮಾಪುರ 13:1). ಬೈಬಲಿನ ಅಧಿಕಾರವು ಮೇಲ್ದರ್ಜೆಗೆ ಅಥವಾ ಕೆಳದರ್ಜೆಗೆ ಸಂಬಂಧ ಪಡುವದಿಲ್ಲ ಆದರೆ ಅವೆಲ್ಲವು ದೇವರ ಯೋಜನೆಗಳಾಗಿರುತ್ತವೆ. [3]Quoted in William Barclay, *The Letters to the Galatians and Ephesians,* rev. ed., The Daily Study Bible Series (Philadelphia: Westminster Press, 1976), 168-71. [4]Ibid. [5]Ibid., 173. [6]KJVಯಲ್ಲಿ "ಪೂಜ್ಯಭಾವ" ಎಂದು ನಮೂದಿಸಿದೆ 5:33. [7]ಮದುವೆಯ ಮತ್ತು ಕುಟುಂಬದ ವಿಷಯದಲ್ಲಿ ಮಾತನಾಡುವಾಗ, ಸರಳವಾದ ಆಹ್ವಾನವನ್ನು ನಾನು

ನೀಡುತ್ತೇನೆ. ಮನೆ ಎಂಬುದಾಗಿ ಹೇಳುವಾಗ ಅದು *ಕ್ರೈಸ್ತರ* ಮನೆ ಎಂದು ತಿಳಿಯುವುದು ಆ ಮನೆಯ ಪ್ರತಿಯೊಬ್ಬರೂ ನಂಬಿಗಸ್ತರಾಗಿರಬೇಕು. ನಂತರ ಹೇಗೆ ಕ್ರೈಸ್ತರಾಗಬೇಕು ಎಂದು ತಿಳಿಸುತ್ತೇನೆ ಪುನಃ ಸ್ಥಾಪಿಸಿಕೊಳ್ಳಲು ಮನವಿಮಾಡುತ್ತೇನೆ.